ಅ) ಅರಣ್ಯದಿಂದ ಯಾವುದೇ ಮರಗಳನ್ನು ಆರಿಸಿ ಕಡಿದಿರುವುದು ಇರುವುದಿಲ್ಲ.

ವಿಷಯ :- ಕುಂದಾಪುರ ತಾಲ್ಲೂಕು ಕೇಂದ್ರದಲ್ಲಿ ಅರಣ್ಯ ಇಲಾಖೆಯಿಂದ ಅತಿಥಿ ಗೃಹ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 763 (1523)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕುಂದಾಪುರ ತಾಲ್ಲೂಕು ಕೇಂದ್ರದಲ್ಲಿ ಅರಣ್ಯ ಇಲಾಖೆಯ ವತಿಯಿಂದ ಕಟ್ಟುವ ಅತಿಥಿ ಗೃಹಕ್ಕೆ ತಗಲುವ ಅಂದಾಜುವೆಷ್ಟು?

2. ಈ ಅತಿಥಿ ಗೃಹಕ್ಕೆ ಈ ತನಕ ಆದ ಖರ್ಚೆಷ್ಟು? ಮತ್ತು ಇನ್ನೂ ಆಗಬೇಕಾದ ಖರ್ಚೆಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :-

1. ಅಂದಾಜು ಮೆಚ್ಚ ರೂ. 17, 59,354-00 ಆಗಿರುತ್ತದೆ.

2.

ಈ ತನಕ ಆದ ಖರ್ಚು ರೂ.	ಇನ್ನೂ ಆಗಬೇಕಾದ ಖರ್ಚು ರೂ.
13,49,489-00	4,09,677-00

ವಿಷಯ :- ಕುಂದಾಪುರ ತಾಲ್ಲೂಕಿನ ಹೊಸ್ಮಠ ಕೂರ್ಗಿಯ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 764 (1521)

ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಕಿರಿಯ ಪ್ರಾಥಮಿಕ ಶಾಲೆ ಹೊಸ್ಮಠ ಕೂರ್ಗಿ ಗ್ರಾಮದಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಅಧ್ಯಾಪಕರ ಸಂಖ್ಯೆ ಎಷ್ಟು?

ಆ) ಪರಿಶಿಷ್ಟ ಜಾತಿ ಮತ್ತು ಕೊರಗ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?